ಸರ್ಕಾರದ ಗಮನಕ್ಕೆ ಬಂದಿದೆ. ಅದನ್ನೇ ನಾವೀಗ ಪರಿಷ್ಕರಣೆ ಮಾಡುತ್ತಿದ್ದೇವೆ. ಅದು ಮಾಡಿದ ಮೇಲೆ ಈ ತರಹದ ಸಮಸ್ಯೆ ಉದ್ಭವವಾಗುವುದಿಲ್ಲ.

ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಪ್ರೋತ್ಸಾಹ

171 - ಶ್ರೀ ಎನ್. ಯೋಗೇಶ್ ಭಟ್ (ಮಂಗಳೂರು) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಿ, ನಿರುದ್ಯೋಗ ನಿವಾರಣೆ ಮಾಡಲು 98-99ರ ಸಾಲಿನಲ್ಲಿ ರಾಜ್ಯ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಆ) ಈ ಬಗ್ಗೆ 1995-96, 1996-97 ಮತ್ತು 1997-98ರಲ್ಲಿ ಸರ್ಕಾರದ ಸಾಧನೆಗಳೇನು?

ಇ) ಪ್ರಸ್ತುತ ಕೇಂದ್ರ ಸರ್ಕಾರದಿಂದ ಈ ನಿಟ್ಟಿನಲ್ಲಿ ಎಷ್ಟು ಅನುದಾನ ಹಾಗೂ ಸಹಾಯಧನ ರಾಜ್ಯ ಸರ್ಕಾರ ಪಡೆಯುತ್ತಿದೆ?

ಶ್ರೀ ಬಿ. ಎ. ಮೊಹಿದ್ದೀನ್ (ಸಣ್ಣ ಕೈಗಾರಿಕಾ ಸಚಿವರು) :

ಅ) ರಾಜ್ಯದಲ್ಲಿ ನಿರುದ್ಯೋಗ ನಿವಾರಣೆಗಾಗಿ ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಲು ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆಯಡಿ ಹಣಕಾಸು ಸಂಸ್ಥೆಗಳಿಂದ ಸಾಲ ಮಂಜೂರು ಮಾಡಲು ಅನುವು ಮಾಡಿಕೊಡಲಾಗುತ್ತಿದೆ. ಹಾಗೂ 'ವಿಶ್ವ' ಯೋಜನೆಯಡಿ ಗ್ರಾಮಾಂತರ ಪ್ರದೇಶಗಳಲ್ಲಿ ಗುಡಿ ಕೈಗಾರಿಕೆಗಳನ್ನು ಸ್ಥಾಪಿಸಲು ಅವಶ್ಯಕತೆ ಇರುವ ತರಬೇತಿ ನೀಡಿ, ತರಬೇತಿ ಹೊಂದಿದ ಹಾಗೂ ಅನುವಂಶಿಕ ಕುಶಲಕರ್ಮಿಗಳಿಗೆ ಹಣಕಾಸು ಸಂಸ್ಥೆಗಳಿಂದ ಸಾಲ ಮಂಜೂರಾತಿ ಮಾಡಲು ಅನುವು ಮಾಡಿಕೊಡಲಾಗುತ್ತಿದೆ.

ಇದಲ್ಲದೆ 98-99ರ ಸಾಲಿನಲ್ಲಿ ಹೊಸದಾಗಿ ಸ್ವರ್ಣ ಜಯಂತಿ ಷಹರಿ ರೋಜ್‌ಗಾರ್ ಯೋಜನೆಯನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.

(ಆ) ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆ (ಸಣ್ಣ ಕೈಗಾರಿಕೆಗಳಿಗೆ ಮಾತ್ರ)

(ರೂ. ಲಕ್ಷಗಳಲ್ಲಿ)

ಕ್ರ.ಸಂ.	ವರ್ಷ	ಸಂಖ್ಯೆ	ಸಾಲ ಮಂಜೂರಾದ ಮೊತ್ತ
1.	1995-96	4491	ರೂ. 2526.17 ಲಕ್ಷ
2.	1996-97	4230	ರೂ. 2544.46 ಲಕ್ಷ
3.	1997-98	4300	ರೂ. 2579.46 ಲಕ್ಷ
	(ಫೆಬ್ರವರಿ ಅಂತ್ಯದ ವರೆಗೆ)		

(2) 'ವಿಶ್ವ' ಯೋಜನೆ :

ಕ್ರ. ಸಂ.	ವರ್ಷ	ತರಬೇತಿ ಹೊಂದಿದವರ ಸಂಖ್ಯೆ	ಉತ್ಪಾದನೆಯಲ್ಲಿ ತೊಡಗಿದವರ ಸಂಖ್ಯೆ
1.	1995-96	22271	42885
2.	1996-97	17296	34824
3.	1997-98	11584	26073
(ಫೆಬ್ರವರಿ 98ರ ಅಂತ್ಯಕ್ಕೆ)			

ಇ) (1) ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆಯಡಿ ಕಳೆದ 3 ವರ್ಷಗಳಲ್ಲಿ ಪಡೆದ ಅನುದಾನದ ವಿವರಗಳು ಕೆಳಕಂಡಂತಿದೆ;

ಕ್ರ. ಸಂ.	ವರ್ಷ	ಕೇಂದ್ರ ಸರ್ಕಾರದ ಅನುದಾನ
1.	1995-96	ರೂ. 151,94,150
2.	1996-97	ರೂ. 102,03,630
3.	1997-98	ರೂ. 83,10,000
	ಒಟ್ಟು	ರೂ. **337,07,780**

(2) 'ವಿಶ್ವ' ಯೋಜನೆಯು ರಾಜ್ಯ ವಲಯ ಯೋಜನೆಯಾಗಿದ್ದು, ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಯಾವುದೇ ಅನುದಾನ ಪಡೆದಿಲ್ಲ.

(3) ಸ್ವರ್ಣ ಜಯಂತಿ ಷಹರಿ ರೋಜ್‌ಗಾರ್ ಯೋಜನೆಯನ್ನು 1998-99ರ ಸಾಲಿನಿಂದ ಅನುಷ್ಠಾನಗೊಳಿಸಲು ಉದ್ದೇಶಿಸಿದ್ದು, ಅನುದಾನದಲ್ಲಿ ಕೇಂದ್ರ ಸರ್ಕಾರದಿಂದ ರೂ. 300.00 ಲಕ್ಷಗಳನ್ನು ಪಡೆಯುವ ನಿರೀಕ್ಷೆಯಿದೆ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಉಪಾಧ್ಯಕ್ಷರೇ, ಇಲ್ಲಿ ಬಂದಿರುವಂತಹ ಪ್ರಶ್ನೆ ಏನು ಎಂದು ಹೇಳಿದರೆ, ವಿಶೇಷವಾಗಿ ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆಯಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಪಡೆದ ಅನುದಾನ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. 1995-96ನೇ ಸಾಲಿನಲ್ಲಿ ಒಂದು ಕೋಟಿ 51 ಲಕ್ಷ 94 ಸಾವಿರದ 150 ರೂ.ಗಳ ಅನುದಾನ ಪಡೆದಿದ್ದರೆ 1996-97ನೇ ಸಾಲಿನಲ್ಲಿ ಒಂದು ಕೋಟಿ 2 ಲಕ್ಷ 3 ಸಾವಿರದ 630 ರೂ.ಗಳ ಅನುದಾನ, ಹಾಗೂ 1997-98ನೇ ಸಾಲಿನಲ್ಲಿ 83 ಲಕ್ಷ 10 ಸಾವಿರ ರೂ.ಗಳ ಅನುದಾನ ಪಡೆಯಲಾಗಿದೆ. ಅಂದರೆ

ವರ್ಷದಿಂದ ವರ್ಷಕ್ಕೆ ನಿರುದ್ಯೋಗಿಗಳ ಸಂಖ್ಯೆ ಕಡಿಮೆಯಾಗುತ್ತಿದೆ ಎಂಬುದು ಸರ್ಕಾರದ ಲೆಕ್ಕವೇ ಅಥವಾ ನಮ್ಮ ಕಡೆಯಿಂದ ಕ್ರಿಯಾ ಯೋಜನೆಯಲ್ಲಿ ಏನಾದರೂ ಲೋಪವಾಗಿದೆಯೇ? ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೋರುತ್ತೇನೆ.

ಶ್ರೀ ಬಿ. ಎ. ಮೊಹಿದ್ದೀನ್ : ಮಾನ್ಯ ಉಪಾಧ್ಯಕ್ಷರೇ, ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆ ಕೇವಲ ಉದ್ದಿಮೆಗಳಿಗೆ ಮಾತ್ರ ಸೀಮಿತವಲ್ಲ. ಅಲ್ಲಿ ವ್ಯಾಪಾರ, ಸರ್ವೀಸ್ ಇವೆಲ್ಲಾ ಬರುತ್ತವೆ. ಕೆಲವು ಸಂದರ್ಭದಲ್ಲಿ ಇವತ್ತಿನ ವಾತಾವರಣದಲ್ಲಿ ಉದ್ದಿಮೆಗಳ ಕಡೆಗೆ ಹೆಚ್ಚು ಜನ ವಾಲುತ್ತಿಲ್ಲ. ವ್ಯಾಪಾರಕ್ಕೆ ಮತ್ತು ಸರ್ವೀಸ್ ಸೆಕ್ಟಾರ್‌ಗೆ ಹೆಚ್ಚು ಜನ ಹೋಗುತ್ತಿದ್ದಾರೆ. ನಮ್ಮ ರಾಜ್ಯಕ್ಕೆ ಟಾರ್ಗೆಟ್ 17 ಸಾವಿರ ಇತ್ತು. ಈ ಸಲ ನಮ್ಮ ರಾಜ್ಯ ಮತ್ತು ಹರಿಯಾಣ ರಾಜ್ಯ ಎರಡೂ ಒಳ್ಳೆಯ ರಿಕವರಿ ಮಾಡಿದ್ದೇವೆಂದು ಹೇಳಿ, ನಮ್ಮ ಟಾರ್ಗೆಟ್ ಅನ್ನು ಕೇಂದ್ರ ಸರ್ಕಾರದವರು 22 ಸಾವಿರಕ್ಕೆ ಏರಿಸಿದ್ದಾರೆ. ಚಿಕ್ಕ ಉದ್ದಿಮೆಗಳ ಬಗ್ಗೆ ಸ್ವಲ್ಪ ಕಡಿಮೆಯಾಗಿದೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದಕ್ಕೆ ಬೇರೆ ಬೇರೆ ಕಾರಣಗಳಿವೆ. ಅದು ತಮಗೂ ಗೊತ್ತಿದೆ. ಇನ್‌ಫ್ರಾಸ್ಟ್ರಕ್ಚರ್, ವಿದ್ಯುಚ್ಛಕ್ತಿ ಅಭಾವ ಅಥವಾ ಮತ್ತೊಂದು ಕಾರಣದಿಂದಾಗಿ ಸ್ವಲ್ಪ ಕಡಿಮೆಯಾಗಿದೆ. ಅದರ ಅರ್ಥ, ನಾವು ಅನ್‌ಎಂಪ್ಲಾಯ್‌ಮೆಂಟ್ ಅನ್ನು ಟ್ಯಾಕಲ್ ಮಾಡುವುದರಲ್ಲಿ ಹಿಂದೆ ಬಿದ್ದಿದ್ದೇವೆ ಎಂದಲ್ಲ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಉಪಾಧ್ಯಕ್ಷರೇ, ವಿಶ್ವ ಯೋಜನೆಯಡಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಗುಡಿ ಕೈಗಾರಿಕೆಗಳನ್ನು ಸ್ಥಾಪಿಸಲು ಅವಶ್ಯಕತೆ ಇರುವ, ತರಬೇತಿ ಹೊಂದಿದ ಹಾಗೂ ಅನಾವಶ್ಯಕ ಕುಶಲ ಕರ್ಮಿಗಳಿಗೆ ಹಣಕಾಸು ಸಂಸ್ಥೆಗಳಿಂದ ಸಾಲ ಮಂಜೂರಾತಿ ಮಾಡಲು ಅನುವು ಮಾಡಿಕೊಡಲಾಗುತ್ತಿದೆ. ಬಹುಶಃ ಇದರಲ್ಲಿ ಟ್ರೈನ್ಡ್ ಆದ ಕುಶಲಕರ್ಮಿಗಳು ಯಾರಿದ್ದಾರೆ, ಅವರು ಬ್ಯಾಂಕನ್ನು ಏನಾದರೂ ಅಪ್ರೋಚ್ ಮಾಡಿದರೆ, ಸಂಪರ್ಕ ಮಾಡಿದರೆ ಈಗಿನ ವ್ಯವಸ್ಥೆಯಲ್ಲಿ ತುಂಬಾ ಕಷ್ಟವಾಗುತ್ತಿದೆ. ಈ ನಿಟ್ಟಿನಲ್ಲಿ ಅವರಿಗೆ ಸಮಯಕ್ಕೆ ಸರಿಯಾಗಿ ಬೇಕಾಗುವಷ್ಟು ಕನಿಷ್ಠ ವರ್ಕಿಂಗ್ ಕ್ಯಾಪಿಟಲ್ ಹಾಗೂ ಇದಕ್ಕೆ ಬೇಕಾದಂತಹ ವ್ಯವಸ್ಥೆಯನ್ನು, ಎಷ್ಟು ಲೋನ್ ಬೇಕೋ ಅಷ್ಟು ಕೊಡುವಂತಹ ನಿಟ್ಟಿನಲ್ಲಿ ತಾವೇನು ಕ್ರಮ ಕೈಗೊಂಡಿದ್ದೀರಿ?

ಶ್ರೀ ಬಿ. ಎ. ಮೊಹಿದ್ದೀನ್ : ಮಾನ್ಯ ಉಪಾಧ್ಯಕ್ಷರೇ, ಈ ನಿಟ್ಟಿನಲ್ಲಿ ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಇದೆ. ಅದನ್ನು ಅವರು ಮಾನಿಟರ್ ಮಾಡುತ್ತಿರುತ್ತಾರೆ. ರಾಷ್ಟ್ರೀಕೃತ ಬ್ಯಾಂಕ್‌ಗಳು ಈ ಚಿಕ್ಕ ಉದ್ಯಮಿಗಳಿಗೆ ಸಾಲ ಕೊಡುವುದರಲ್ಲಿ ಹಿಂದೆ ಬಿದ್ದಿದ್ದಾರೆ ಎಂಬುದು ನಿಜ. ಈ ವಿಚಾರವನ್ನು ನಾವು ಕೇಂದ್ರ ಸರ್ಕಾರದ ಗಮನಕ್ಕೆ ತಂದಿದ್ದೇವೆ, ರಿಸರ್ವ್ ಬ್ಯಾಂಕ್‌ನ ಗಮನಕ್ಕೂ ತಂದಿದ್ದೇವೆ. ಈ ಒತ್ತಡಗಳನ್ನು ತರುವುದರಿಂದ ಮಾತ್ರ ಇದು ಸಾಧ್ಯವಾಗುತ್ತದೆಯೇ ವಿನಃ ಈ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂತಹ ಬ್ಯಾಂಕ್ ಮ್ಯಾನೇಜರ್‌ಗಳು ಈ ಒಂದು ಯೋಜನೆಯನ್ನು ಕಾರ್ಯರೂಪಕ್ಕೆ ತರುವಲ್ಲಿ ಸಹಕರಿಸುತ್ತಿಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಆದರೂ ಕೂಡ ನಾನು ಸುಮ್ಮನೆ ಇಲ್ಲ. ಈ ವರ್ಷಕ್ಕೆ ನಾವು ಇನ್ನೊಂದು ಹೊಸ ಯೋಜನೆಯನ್ನು ತಂದಿದ್ದೇವೆ. ಅದು ತಮಗೂ ಕೂಡ ಪ್ರಿಯವಾದಂತಹ ಒಂದು ಯೋಜನೆ. ನಿಮ್ಮ ಕ್ಷೇತ್ರಕ್ಕೂ ಅದು

ಅನ್ವಯವಾಗುತ್ತದೆ. ಈ ಯೋಜನೆ ಹೆಸರು 'ಸ್ವರ್ಣಜಯಂತಿ ರೋಜ್‌ಗಾರ್ ಯೋಜನೆ' ಎಂದು. ನಾವು ಈಗಾಗಲೇ ಅದನ್ನು ಕಾರ್ಯರೂಪಕ್ಕೆ ತರಲಿಕ್ಕಾಗಿ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ. ನಗರ ಪ್ರದೇಶಗಳಲ್ಲಿರತಕ್ಕಂತಹ ನಿರುದ್ಯೋಗಿಗಳಿಗಾಗಿ ನಾವು ಈ ಸಾಲಿನಲ್ಲಿ 100 ಲಕ್ಷ ರೂ.ಗಳನ್ನು ಬಜೆಟ್‌ನಲ್ಲಿ ಇಟ್ಟಿದ್ದೇವೆ. ಇದರ ಜೊತೆಗೆ ಕೇಂದ್ರ ಸರ್ಕಾರದವರೂ ಕೂಡ ನಮಗೆ 3 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಇದನ್ನು ನಾವು ಈ ವರ್ಷ ಕಾರ್ಯರೂಪಕ್ಕೆ ತರುತ್ತೇವೆ ಎನ್ನುವುದನ್ನು ನಾನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಉಪಾಧ್ಯಕ್ಷರೇ, ಕನಿಷ್ಟ 20 ಕೋಟಿ ರೂ.ಗಳನ್ನಾದರೂ ಮೀಸಲಾಗಿಟ್ಟಿದ್ದರೆ ಸ್ವಲ್ಪ ಯುವಕರಿಗೆ ತಲುಪುವಂಥಾದ್ದು ಆಗುತ್ತದೆ. ಈಗ ನೀವು ಇಟ್ಟಿರುವ ಹಣ ಏನೇನೂ ಸಾಲದು. ಇದರ ಬಗ್ಗೆ ಖಂಡಿತವಾಗಿಯೂ ತಾವು ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಮಾತುಕತೆ ನಡೆಸಿ, ಈ ಮೊತ್ತವನ್ನು ಜಾಸ್ತಿ ಮಾಡಲಿಕ್ಕಾಗುತ್ತದೆಯೇ? ಎಂದು ನಾನು ಮಾನ್ಯ ಮಂತ್ರಿಗಳನ್ನು ತಮ್ಮ ಮೂಲಕ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಜಯರಾಮ ಶೆಟ್ಟಿ : ಮಾನ್ಯ ಉಪಾಧ್ಯಕ್ಷರೇ, ಬ್ಯಾಂಕಿನ ಮ್ಯಾನೇಜರ್‌ಗಳು ಸಹಕಾರ ಕೊಡುತ್ತಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದರು. ಯಾವುದೇ ಗ್ರಾಮಾಂತರ ಪ್ರದೇಶಗಳಲ್ಲಿ ಯಾವ ಬ್ಯಾಂಕಿನವರೂ ಕೂಡ ಇಲಾಖೆಯಿಂದ ಈ ಕಾರ್ಯಕ್ರಮವನ್ನು ಜಾರಿಗೊಳಿಸುತ್ತಿಲ್ಲ. ಆದುದರಿಂದ ನಿಮ್ಮ ಕಾರ್ಯಕ್ರಮಗಳು ಹೇಗೆ ಜಾರಿಯಾಗುತ್ತವೆ? ನಿಜವಾಗಿ ಕೆಳ ಹಂತದ ಫಲಾನುಭವಿಗಳಿಗೆ ಬ್ಯಾಂಕ್ ಲೋನ್‌ಗಳು ಸಿಗುವಂತಹ ಯಾವುದೇ ವ್ಯವಸ್ಥೆ ನಿಮ್ಮ ಇಲಾಖೆಯಲ್ಲಿ ಜಾರಿಗೊಳ್ಳತ್ತಿಲ್ಲ. ಆದುದರಿಂದ ಸದರಿ ನಿಮ್ಮ ಕಾರ್ಯಕ್ರಮಗಳು ಜಾರಿಯಾಗುವುದಿಲ್ಲ. ಇದರ ಬಗ್ಗೆ ತಾವೇನು ನಿರ್ದಿಷ್ಟ ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಸಿ. ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೇ, ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆಯಡಿಯಲ್ಲಿ ಮತೀಯ ಅಲ್ಪಸಂಖ್ಯಾತರಿಗೆ ಶೇಕಡ 12ರಷ್ಟು ಕನಿಷ್ಟ ಮೀಸಲಾತಿ ಕೊಡಬೇಕೆಂದು ಕೇಂದ್ರ ಸರ್ಕಾರದ ಕಾನೂನಿನಲ್ಲಿ ಇದೆ. ಆದರೆ ಸರ್ಕಾರವೇ ಒಪ್ಪುವ ರೀತಿಯಲ್ಲಿ ಇಂತಹ ನಿರುದ್ಯೋಗಿ ಯುವಕರಿಗೆ ರಾಷ್ಟ್ರೀಕೃತ ಬ್ಯಾಂಕ್‌ನವರು ಪ್ರೋತ್ಸಾಹ ನೀಡುತ್ತಿಲ್ಲ. ಆದುದರಿಂದ ಸರ್ಕಾರ ರಾಷ್ಟ್ರೀಕೃತ ಬ್ಯಾಂಕ್‌ನ ಅಧಿಕಾರಿಗಳ ಜೊತೆಗೆ ಎಷ್ಟು ಸಮಯದಲ್ಲಿ, ಯಾವ್ಯಾವ ಸಭೆಗಳನ್ನು ಕರೆದು ಇತ್ಯರ್ಥ ಮಾಡುವಂತಹ ಪ್ರಯತ್ನಗಳನ್ನು ಸರ್ಕಾರ ನಡೆಸಿದೆ? ಎಂದು ಕೇಳಬಯಸುತ್ತೇನೆ.

ಶ್ರೀ ಬಿ. ಎ. ಮೊಹಿದ್ದೀನ್ : ಮಾನ್ಯ ಉಪಾಧ್ಯಕ್ಷರೇ, ಕಾಲ ಕಾಲಕ್ಕೆ ಸಭೆಗಳನ್ನು ನಡೆಸಿದ್ದರಿಂದಲೇ ಇವತ್ತು ನಮ್ಮ ಟಾರ್ಗೆಟ್ 18 ಸಾವಿರಗಳಿಂದ 22 ಸಾವಿರಕ್ಕೆ ಹೋಗಿದೆ. ಮಾನ್ಯ ಜಯರಾಮಶೆಟ್ಟರು ಹೇಳಿದ ಹಾಗೆ, ಇದಕ್ಕೆ ಏನಾದರೂ ಒಂದು ಕಾಯಕಲ್ಪ ನಾವು ಮಾಡಬೇಕಾಗುತ್ತದೆ. ಈಗ ಕೇಂದ್ರದಲ್ಲಿ ಅವರದೇ ಸರ್ಕಾರ ಇದೆ. ಅವರು ಈಗ ಈ ಗ್ರಾಮಾಂತರ ಪ್ರದೇಶಗಳ ರಾಷ್ಟ್ರೀಕೃತ ಬ್ಯಾಂಕ್‌ಗಳ ಮೇಲೆ ಒತ್ತಡ ತರಲೇಬೇಕು. ನಾನೂ ಕೂಡ ಅದರ ಜೊತೆಗೆ ಇದ್ದೇನೆ. ಪಿಎಂಆರ್‌ವೈ

ಯೋಜನೆಯಡಿಯಲ್ಲಿ ಸುಮಾರು ಶೇಕಡ 17ರಷ್ಟನ್ನು ನಾವು ಕೆಲವೊಂದು ಜಿಲ್ಲೆಗಳಲ್ಲಿ ಮತೀಯ ಅಲ್ಪಸಂಖ್ಯಾತರಿಗೆ ಕೊಟ್ಟಿದ್ದೇವೆ. ಕೆಲವು ಜಿಲ್ಲೆಗಳಲ್ಲಿ ಅಷ್ಟು ಮೀಸಲಾತಿ ನೀಡಿಲ್ಲವೆಂಬುದು ನನಗೆ ಗೊತ್ತು. ಉದಾಹರಣೆಗೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಪಿಎಂಆರ್‌ವೈ ನಲ್ಲಿ ಅಷ್ಟು ಮೀಸಲಾತಿ ನೀಡಲಾಗಿಲ್ಲ. ನಾನು ಮೊನ್ನೆ ತಾನೇ ಅಲ್ಲಿಗೆ ಹೋಗಿ ಇನ್ಸ್‌ಪೆಕ್ಷನ್ ಮಾಡಿದ್ದೇನೆ. ನಾವು ನಿರೀಕ್ಷಿಸಿದಷ್ಟು ಪ್ರಗತಿ ಪಿಎಂ ಆರ್‌ವೈ ನಲ್ಲಿ ಅಲ್ಲಿ ಆಗಿಲ್ಲ. ನಾನು ಅದರ ಬಗ್ಗೆ ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳಿಂದ ಸಮಜಾಯಿಷಿ ಕೇಳಿದ್ದೇನೆ. ಅದರ ಬಗ್ಗೆ ಕ್ರಮ ಜರುಗಿಸುತ್ತೇನೆ.

ಮಾಂಗಲ್ಯ ಭಾಗ್ಯ ಯೋಜನೆ

163 - ಶ್ರೀ ಯು. ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಂಗಲ್ಯ ಭಾಗ್ಯ ಯೋಜನೆ ಎಂದಿನಿಂದ ಜಾರಿಗೆ ಬಂದಿರುತ್ತದೆ? (ವಿವರಗಳನ್ನು ನೀಡುವುದು).

ಆ) 1998-99ನೇ ಸಾಲಿನಲ್ಲಿ ಈ ಯೋಜನೆಗೆ ನಿಗದಿಪಡಿಸಿದ ಹಣವೆಷ್ಟು?

ಶ್ರೀ ಮಾಲೀಕಯ್ಯ ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ಮತ್ತು ಆ) ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ವರ್ಗಗಳಿಗೆ ಸೇರಿದ ತಂದೆ ತಾಯಿಗಳಿಗೆ ಅವರ ಮೊದಲನೇ ಮಗಳ ಮದುವೆ ನಡೆಸುವ ಸಲುವಾಗಿ 5000 ರೂ.ಗಳನ್ನು ಸಹಾಯಧನವನ್ನಾಗಿ ನೀಡುವ ಉದ್ದೇಶದಿಂದ 'ಮಾಂಗಲ್ಯಭಾಗ್ಯ' ಎಂಬ ಯೋಜನೆಯನ್ನು 98-99ನೇ ಸಾಲಿನಿಂದ ಜಾರಿಗೆ ತರಲು ಉದ್ದೇಶಿಸಲಾಗಿದೆ. ಇತರೆ ಯೋಜನೆಗಳಿಗೆ ಒದಗಿಸಿರುವ ಮೊತ್ತದಿಂದ ಮರು ಹೊಂದಾಣಿಕೆ ಮೂಲಕವಾಗಲೀ ಅಥವಾ ಹೆಚ್ಚುವರಿ ಅನುದಾನವನ್ನು ಪಡೆಯುವ ಮೂಲಕವಾಗಲೀ ಈ ಯೋಜನೆಯನ್ನು ಈ ಸಾಲಿನಿಂದ ಜಾರಿಗೊಳಿಸಲು ಉದ್ದೇಶಿಸಲಾಗಿದೆ.

ಶ್ರೀ ವಿಶ್ವೇಶ್ವರ ಹೆಗ್ಗಡೆ (ಶ್ರೀ ಯು. ಬಿ. ಬಣಕಾರ್ ಅವರ ಪರವಾಗಿ) : ಮಾನ್ಯ ಉಪಾಧ್ಯಕ್ಷರೇ, ಖಾಲಿ ಡಬ್ಬಿ ಬಹಳ ಶಬ್ದ ಮಾಡುತ್ತದಂತೆ. ಸರ್ಕಾರದ ಪರಿಸ್ಥಿತಿ ಹಾಗೆಯೇ ಆಗಿದೆ. ಹಿಂದುಳಿದ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ಕುಟುಂಬದ ಸದಸ್ಯರಿಗೆ ಮೊದಲನೇ ಹೆಣ್ಣು ಮಕ್ಕಳಿಗೆ 5 ಸಾವಿರ ರೂ.ಗಳ ನೆರವು ನೀಡುತ್ತೇವೆಂದು ಸರ್ಕಾರ ಬಜೆಟ್‌ನಲ್ಲಿ ಹೇಳಿದೆ.'ಮಾಂಗಲ್ಯಭಾಗ್ಯ' ಎನ್ನುವಂತಹ ಈ ಒಂದು ಹೊಸ ಯೋಜನೆಯನ್ನು ಸರ್ಕಾರ ಈ ಬಾರಿ ಪ್ರಕಟ ಮಾಡಿದೆ. ಮಾನ್ಯ ಬಣಕಾರ್‌ರವರು ಇಲ್ಲಿ ಕೇಳಿರುವ 'ಮಾಂಗಲ್ಯ ಭಾಗ್ಯ' ಕ್ಕೆ ಎಷ್ಟು ಹಣ ತೆಗೆದಿರಿಸಿದ್ದೀರಿ ಎಂಬ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರಿಸುತ್ತಾ ಇತರೇ ಯೋಜನೆಗಳಲ್ಲಿ ಒದಗಿಸಿರುವ ಮೊತ್ತದಿಂದ ಮರು ಹೊಂದಾಣಿಕೆ ಮೂಲಕವಾಗಲೀ ಅಥವಾ ಹೆಚ್ಚುವರಿ ಅನುದಾನ ಪಡೆಯುವ ಮೂಲಕವಾಗಲೀ ಈ ಯೋಜನೆಯನ್ನು ಪ್ರಾರಂಭಿಸುತ್ತೇವೆಂದು ಹೇಳಿದ್ದಾರೆ. ಅಂದರೆ ಯಾವುದೇ ಹಣಕಾಸಿನ ಅನುದಾನವನ್ನು ತೆಗೆದಿರಿಸದೆ